**ಎಲ್ ಎ ಸಿ ನಂ.05 /2023 ಪಿ.ಡಬ್ಲ್ಯೂ-1 (ಮಾದಪ್ಪ)**

**ಸಾಕ್ಷಿಯನ್ನು ದಿನಾಂಕಃ 20.09.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ವಕೀಲರಿಂದಃ**

ನನ್ನ ತಂದೆಯ ಹೆಸರು ನಂಜುಂಡಯ್ಯ. ಅದರಿ ನಂಜುಂಡಯ್ಯ ರವರಿಗೆ 5 ಜನ ಮಕ್ಕಳು. ಅವರುಗಳನ್ನು ಈ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಾನು ನಾನು ಪೆಂಜಳ್ಳಿ ಗ್ರಾಮದ ಸ. ನಂ.3/ಎ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಸದರಿ ಜಮೀನು ನನ್ನ ಮಾವನವರಿಗೆ ಸೇರಿತ್ತು. ಸದರಿ ಸ.ನಂ 3/ಎ ರಲ್ಲಿ ನಮ್ಮದು 2 ಎಕರೆ 16 ಗುಂಟೆ ಜಮೀನು ಇತ್ತು. ಸದರಿ ಜಮೀನಿನಲ್ಲಿ 20 ಗುಂಟೆ ಜಮಿನನ್ನು ಸರ್ಕಾದವರು ತಾರಕ ನಾಲಾ ನಿರ್ಮಾಣಕ್ಕಾಗಿ ಭೂ ಸ್ವಾಧೀನ ಪಡಿಸಿಕೊಂಡಿರುತ್ತಾರೆ. ಈಗ ಉಳಿಕೆ 1 ಎಕರೆ 29 ಗಂಟೆ ಜಮೀನು ಇರುತ್ತದೆ. ಅದಕ್ಕೆ ಸಂಬಂದಿಸಿದಂತೆ ಪಹಣಿ ಪತ್ರಿಕೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಈಗಲೂ ಉಳಿಕೆಯ ಜಮಿನಿನಲ್ಲಿ ವ್ಯವಸಾಯ ಮಾಡಿಕೊಂಡಿರುತ್ತೇನೆ. ಸದರಿ ಜಮಿನಿನಿಂದ ನನ್ನ ಜೀವನಕ್ಕೆ ಆಗುವಷ್ಟು ಆಧಾಯ ಬರುತ್ತಿರುತ್ತದೆ ಎಂದರೆ ಸರಿ. ಸದರಿ ಜಮೀನು ಅಲ್ಲದೆ ನನ್ನ ತಂದೆ ಕಡೆಯಿಂದ ಬಂದ ಜಮೀನು ಸಹ ಇರುತ್ತದೆ. ಸದರಿ ಸ್ವಾಧೀನಕ್ಕೆ ಸಂಬಂದಿಸಿದಂತೆ ಸರ್ಕಾದವರು 1995 ರಲ್ಲಿ ಪರಿಹಾದ ಹಣವನ್ನು ನನ್ನ ಹೆಂಡತಿಯ ಹೆಸರಿಲ್ಲಿ ಜಮೆ ಮಾಡಲಾಗಿರುತ್ತದೆ. ಮುಂದುವರೆದು ನನ್ನ ಹೆಂಡತಿಯ ಹೇಳಿಕೆಯ ಮೇರೆಗೆ ಪರಿಹಾರದ ಹಣ ನನಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪರಿಹಾರದ ಹಣವನ್ನು ಯಾವಾಗ ಪಡೆದುಕೊಂಡಿರುತ್ತೇನೆ ಎಂದು ಈಗ ನನಗೆ ನೆನಪು ಇರುವುದಿಲ್ಲ. ನಾನು ಪರಿಹಾದ ಹಣವನ್ನು ಪಡೆದುಕೊಂಡ ತಕ್ಷಣವೇ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತೇನೆ. 2005 ರಲ್ಲಿ ಕಡತವನ್ನು ಕಳುಹಿಸಿಕೊಡಿ ಎಂದು

ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಿಪಿ 1 ರಂತೆ ಭೂಸ್ವಾಧೀನವಾಗಿರುವ ಜಮೀನು ಮತ್ತು ನನ್ನ ಜಮೀನು ಒಂದೇ ಫಲವತ್ತತೆ ಇರುತ್ತದೆ ಎಂದು ಹೇಳಿ ಮಣ್ಣು ಪರೀಕ್ಷೆ ಮಾಡಿಸಿರುವುದಿಲ್ಲ. ನನ್ನ ಜಮೀನು ಮತ್ತು ನಿಪಿ 1 ರಲ್ಲಿ ಹೇಳಿರುವ ಜಮೀನು ಒಂದೇ ರೀತಿಯ ಜಮೀನು ಎಂದು ಹೇಳಿ ಯಾವುದೇ ದಾಖಲಾತಿಯನ್ನು ನೀಡಿರುವುದಿಲ್ಲ ಎಂದರೆ ಸರಿ. ನಾನು ಉಪನೊಂದಣಿಯವರ ಕಛೇರಿಯಿಂದ ಸ್ವಾಧೀನಪಡಿಸಿಕೊಂಡಿರುವ ಜಮಿನಿನ ಎಸ್ ಆರ್ ವ್ಯಾಲ್ಯೂ ಎಷ್ಟು ಇರುತ್ತದೆ ಮತ್ತು ಅದೇ ರೀತಿ ನಿಪಿ 1 ರಲ್ಲಿ ಹೇಳಿರುವ ಜಮೀನಿನ ಎಸ್ ಆರ್ ವ್ಯಾಲ್ಯೂ ಎಷ್ಟು ಇರುತ್ತದೆ ಎಂದು ದಾಖಲಾತಿಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ಜಮೀನು ಇರುವ ಗಡಿ ಮತ್ತು ನಿಪಿ 1 ರಲ್ಲಿ ತೋರಿಸಿರುವ ಜಮೀನಿನ ಗಡಿ ಬೇರೆ ಬೇರೆ ಇರುತ್ತದೆ ಎಂದರೆ ಸರಿ. ನಮ್ಮ ಜಮಿನಿನಲ್ಲಿ ಯಾವುದೇಲ್ಲಾ ಬೆಳೆಗಳನ್ನು ಬೆಳೆಯಲಾಗುತ್ತಿತ್ತು ಎಂದು ನಾನು ಯಾವುದೇ ದಾಖಾಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸರ್ಕಾದವರು ನನ್ನ ಜಮಿನನ್ನು ತಾಂತ್ರಿಕ ಸರ್ವೆಯನ್ನು ಮಾಡಿ ಬೆಲೆಯನ್ನು ನಿರ್ಧರಿಸಿ ಅದರಂತೆಯೇ ಪರಿಹಾರದ ಹಣವನ್ನು ನೀಡಿರುತ್ತದೆ ಮತ್ತು ಅದು ಸೂಕ್ತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನಿಗಧಿತ ಅವಧಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಕೇಳಿರುವಷ್ಟು ಪರಿಹಾರದ ಹಣವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಹೇಳಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿಯಂತೆ ನಾನು ಕೇಳಿದ ಪರಿಹಾದ ಹಣವನ್ನು ಪಡೆಯಲು ಆರ್ಜಿಯು ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ